ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 1, July-August, 2024, Pp. 34-41**
**©*IIMRD*, Mysuru**
IIMRD JOURNALS

**www.iimrd.com**

# ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು: ಒಂದು ತೌಲನಿಕ ಅಧ್ಯಯನ

**ಧರ್ಮರಾಯ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.

**ಸಾರಾಂಶ: (Abstract)**

*ಈ ಅಧ್ಯಯನವು ಕರ್ನಾಟಕದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಪರಿಶೀಲಿಸುತ್ತದೆ. ಇದು ಅವರ ಆದಾಯ ಮಟ್ಟ, ಶೈಕ್ಷಣಿಕ ಸ್ಥಿತಿಗತಿಗಳನ್ನು ಸೇರಿದಂತೆ ಅವರ ಜೀವನೋಪಾಯದ ವಿವಿಧ ಅಂಶಗಳನ್ನು ಕುರಿತು ಚರ್ಚಿಸುತ್ತದೆ. ಸಮೀಕ್ಷೆ ಮತ್ತು ಸಂದರ್ಶನಗಳ ಮೂಲಕ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶದ ಸಮಗ್ರ ವಿಶ್ಲೇಷಣೆಯ ಮೂಲಕ ಈ ಸಮುದಾಯವು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಗುರುತಿಸಲು ಮತ್ತು ಅಸ್ತಿತ್ವದಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಉಪಕ್ರಮಗಳ ಪರಿಣಾಮಕಾರಿತ್ವವನ್ನು ನಿರ್ಣಯಿಸುವ ಗುರಿ ಮತ್ತು ಇದು ಯಾವ ರೀತಿಯಾಗಿ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ ಎಂಬುವುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಗುಲಬರ್ಗಾ ಮತ್ತು ಯಾದಗಿರಿ, ಬುಡಕಟ್ಟು, ವಾಲ್ಮೀಕಿ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು.

## ಪೀಠಿಕೆ

ಜಗತ್ತಿನಲ್ಲೆ ಭಾರತವು ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಬಹುಸಂಸ್ಕೃತಿಗಳು ನೆಲೆಗೊಂಡಿರುವ ಈ ದೇಶದಲ್ಲಿ ವಿವಿಧ ಜಾತಿ, ಮತ, ಧರ್ಮ, ಜನಾಂಗ, ಭಾಷೆ, ಕಲೆ, ಪ್ರಾದೇಶಿಕತೆಯನ್ನೊಳಗೊಂಡು ಒಂದು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ರಾಷ್ಟ್ರವಾಗಿದೆ. ಪ್ರಜಾತಂತ್ರದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅಂಶಗಳನ್ನು ಸಂವಿಧಾನಾತ್ಮಕವಾಗಿ ಈ ದೇಶದ ಎಲ್ಲಾ ನಾಗರೀಕರಿಗೆ ನೀಡಿದ್ದರೂ ಕೂಡ, ಸಾಮಾಜಿಕ ಸ್ತರವಿನ್ಯಾಸದಿಂದ ಕೂಡಿದ ದೇಶವಾಗಿದೆ. ಈ ಸ್ತರವಿನ್ಯಾಸದ ಅತ್ಯಂತ ಕೆಳಸ್ತರದಲ್ಲಿರುವ ಪ್ರಾಚೀನ ಬುಡಕಟ್ಟುಗಳಲ್ಲಿ ವಾಲ್ಮೀಕಿ ಬುಡಕಟ್ಟು ಸಮುದಾಯವೂ ಒಂದು. 'ಮಾನವನು' ಉಗಮದ ನಂತರದಲ್ಲಿ ಎಲ್ಲರೂ ಬೇಟೆಗಾರರೇ ಆಗಿದ್ದರು. ಆದಿಯಿಂದಲೂ ಬೇಡರು ಬೇಟೆಯನ್ನು ವೃತ್ತಿಯನ್ನಾಗಿಸಿಕೊಂಡು, ಧೈರ್ಯ, ಸ್ಥೈರ್ಯ, ಶೌರ್ಯ, ಸಾಹಸ ಪರಾಕ್ರಮಗಳಿಗೆ

*Please cite this article as:* ಧರ್ಮರಾಯ. (2024). ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು: ಒಂದು ತೌಲನಿಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 34–41

ಹೆಸರುವಾಸಿಯಾಗಿದ್ದಾರೆ. ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಜಾತಿ, ಸಮುದಾಯವು ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಈ ನಿಟ್ಟಿನಲ್ಲಿ ಆಲೋಚಿಸಿದಾಗ ಪ್ರತಿಯೊಂದು ಸಮುದಾಯಗಳ ಮೂಲ ನೆಲೆ ಹಾಗೂ ವಾಸಿಸುವ ಪ್ರದೇಶಗಳನ್ನಾಧರಿಸಿ ಅವು ಜಾತಿಗಳಾಗಿ ಪರಿವರ್ತನೆ ಹೊಂದಿದವು. ಭಾರತೀಯ ಸಮಾಜದಲ್ಲಿ ಆರ್ಯರು ಮತ್ತು ದ್ರಾವಿಡರು ಎಂಬ ಎರಡು ಪ್ರಮುಖ ಜಾತಿಗಳನ್ನು ಕಾಣಬಹುದು. ಇವುಗಳಲ್ಲಿ ಭಾರತ ದೇಶದ ಉತ್ತರದ ಭಾಗದಲ್ಲಿ ವಾಸಿಸುವವರು ಆರ್ಯರು ಮತ್ತು ದಕ್ಷಿಣದ ಭಾಗದಲ್ಲಿ ವಾಸಿಸುವವರನ್ನು ದ್ರಾವಿಡ ಜನಾಂಗದವರೆಂದು ಗುರುತಿಸಲಾಗಿದೆ. ಅದರಂತೆ ಮಾನವ ಜನಾಂಗಗಳಲ್ಲಿ ಬೇಡರು ಪ್ರೊಟೊ ಆಸ್ಟ್ರಲಾಯಿಡ್ ಜನಾಂಗಕ್ಕೆ ಸೇರಿದ್ದು, ಭಾರತದಲ್ಲಿ ಇವರು ಮೂಲ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಎಲ್.ಜಿ. ಹಾವನೂರು ಆಯೋಗದ ಪ್ರಕಾರ ಕರ್ನಾಟಕದಲ್ಲಿ ಇವರನ್ನು ದ್ರಾವಿಡರೆಂದು, ನಿಷಾದ, ಪುಳಿಂದ, ವ್ಯಾಧ, ಕಿರಾತ, ಶಬರ, ಬೇಡ, ನಾಯಕ, ವಾಲ್ಮೀಕಿ ತಳವಾರ ಮೊದಲಾದ ಹದಿನೆಂಟಕ್ಕೂ ಹೆಚ್ಚು ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. 'ಬೇಡ' ಅಂದರೆ ಯಾರಿಗೂ ಹೆದರದವನು. 'ನಾಯಕ' ಅಂದರೆ ಸಮಾಜಕ್ಕೆ, ರಾಜ್ಯಕ್ಕೆ ಮುಖಂಡನೆಂದು ಹೆಸರು. 'ವಾಲ್ಮೀಕಿ' ಪುರಾಣ ಪ್ರಸಿದ್ಧ ಋಷಿ ಮತ್ತು ಆದಿ ಕವಿ. 'ವಾಲ್ಮೀಕಿ'ಯ ಹೆಸರು ಒಂದು ಸಮುದಾಯಕ್ಕೆ ಮತ್ತು ಒಬ್ಬ ವ್ಯಕ್ತಿಗೆ ಇರುವುದು ಭವ್ಯ ಪರಂಪರೆಯ ಪ್ರತೀಕ. ಮಹರ್ಷಿ ವಾಲ್ಮೀಕಿ ಈ ದೇಶಕ್ಕೆ ನೀಡಿದ ಕೊಡುಗೆ ಅಪಾರ. ವಾಲ್ಮೀಕಿ ಮೂಲತಃ ಬೇಟೆಗಾರರ ಬುಡಕಟ್ಟಿಗೆ ಸೇರಿದ ಬೇಡ ಸಮುದಾಯದವನು. ಹಾಗಾಗಿ ಈ ಸಮುದಾಯಕ್ಕೆ ವಾಲ್ಮೀಕಿ ಸಮುದಾಯವೆಂದು ಕರೆಯುವುದು ಜನಪ್ರಿಯಾವಾಗಿದೆ. ಕುಲವೊಂದೇ ನಾಮ ಹಲವು ವೃಕ್ಷವೊಂದೇ ಕೊಂಬೆಗಳು ನೂರಾರು ಎನ್ನುಂತೆ ಈ ವಾಲ್ಮೀಕಿ ಸಮುದಾಯ ಭಾರತದ ಉದ್ದಗಲಕ್ಕೂ ಹರಡಿದೆ. ವಿಶೇಷವಾಗಿ ಕರ್ನಾಟಕದಲ್ಲಿ ಬಳ್ಳಾರಿ, ಬೆಳಗಾವಿ, ಧಾರವಾಡ, ಗುಲಬರ್ಗಾ, ದಾವಣಗೆರೆ, ತುಮಕೂರು, ಕೊಪ್ಪಳ, ಮೈಸೂರು, ಯಾದಗಿರಿ (ಸುರಪುರ), ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಜನಸಂಖ್ಯೆಯಲ್ಲಿದ್ದಾರೆ.

ಬುಡಕಟ್ಟು ಸಮುದಾಯಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಣಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲದಿಂದ ಕಾಲಕ್ಕೆ ವಿವಿಧ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಆದರೆ ಈ ಸಮುದಾಯಗಳ ಅಭಿವೃದ್ಧಿ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ಸರ್ಕಾರದ ಅಂಕಿ–ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ವಾಲ್ಮೀಕಿ ಸಮುದಾಯವು ಶೇ.5.39 ರಷ್ಟಿದೆ. ವಿಶೇಷವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕ್ರಮವಾಗಿ 22,259 ಸಾವಿರ ಮತ್ತು 121,976 ಲಕ್ಷ ಜನಸಂಖ್ಯೆ ಇರುವುದನ್ನು ಕಾಣಬಹುದಾಗಿದೆ.

**ಅಧ್ಯಯನದ ಕ್ಷೇತ್ರ ಮತ್ತು ಮಾದರಿ:**

ಈ ಅಧ್ಯಯನ ಕ್ಷೇತ್ರವು ಕರ್ನಾಟಕ ರಾಜ್ಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಕುರಿತಾಗಿದ್ದು, ಅವರ ಸ್ಥೂಲ ಅಧ್ಯಯನಕ್ಕಾಗಿ ರಾಜಕೀಯ ಭಾಗವಹಿಸುವಿಕೆಯನ್ನು ತಿಳಿದುಕೊಳ್ಳುವುದಾಗಿರುವುದರಿಂದ ಈ ಎರಡು ಜಿಲ್ಲೆಗಳಿಂದ ಒಟ್ಟು 400 ಪ್ರತಿವರ್ತಿಗಳನ್ನು ಸಂಶೋಧನಾ

ಅಧ್ಯಯನ ಕ್ಷೇತ್ರಕಾರ್ಯಕ್ಕೆಂದು ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಯಿತು. ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ **'ಸರಳ ಯಾದೃಶ್ಚಿಕ ಅಧ್ಯಯನ ವಿಧಾನ'** ವನ್ನು ಬಳಸಿಕೊಳ್ಳಲಾಯಿತು.

**ಅಧ್ಯಯನದ ಉದ್ದೇಶಗಳು**

- ಕರ್ನಾಟಕದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಾಲ್ಮೀಕಿ ಸಮುದಾಯದ ರಾಜಕೀಯ ಭಾಗವಹಿಸುವಿಕೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು.
- ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಸಂಶೋಧನಾತ್ಮಕ ಅಧ್ಯಯನವು ಪ್ರಾಥಮಿಕ ಅಂಕಿ–ಅಂಶಗಳ (ಕಡಿುಟಚಿಡಿಥಿ ಆಚಿಣಚಿ) ಮೇಲೆ ಅವಲಂಬಿತವಾಗಿದೆ. ಆದರೂ ಪ್ರಾಥಮಿಕ ಅಂಕಿ–ಅಂಶಗಳಿಗೆ ಸಹಕಾರಿಯಾಗಿ ಮಾಧ್ಯಮಿಕ ಅಂಕಿ–ಅಂಶಗಳನ್ನು (ಖಿಜಛಿoಟಿಜಚಿಡಿಥಿ ಆಚಿಣಚಿ) ಬಳಸಿಕೊಳ್ಳಲಾಗಿದೆ.

**ಫಲಿತಾಂಶ ಮತ್ತು ಚರ್ಚೆಗಳು**

ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ವಿಶ್ಲೇಷಿಸುತ್ತದೆ. ಇದು ಯಾವ ರೀತಿಯಾಗಿ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ ಎಂಬುವುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

**ಕೋಷ್ಟಕ 1: ಕುಟುಂಬದ ಸ್ವರೂಪ**

| ಪ್ರತಿಕ್ರಿಯೆ | ಗುಲಬರ್ಗಾ | | ಯಾದಗಿರಿ | | ಒಟ್ಟು | |
|---|---|---|---|---|---|---|
| | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ |
| ಅವಿಭಕ್ತ ಕುಟುಂಬ | 09 | 6% | 14 | 5.6% | 21 | 5.3% |
| ವಿಭಕ್ತ ಕುಟುಂಬ | 141 | 94% | 236 | 94.4% | 377 | 94.3% |
| **ಒಟ್ಟು** | **150** | **100** | **250** | **100** | **400** | **100** |

**ಮೂಲ:** ಕ್ಷೇತ್ರಕಾರ್ಯ

ಕೋಷ್ಟಕ 1: ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಕುಟುಂಬದ ಸ್ವರೂಪವನ್ನು ವಿವರಿಸುತ್ತದೆ. ಗುಲಬರ್ಗಾ ಜಿಲ್ಲೆಯ 6% ಪ್ರತಿವರ್ತಿಗಳು ಅವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಶೇಕಡಾ 94% ರಷ್ಟು ಪ್ರತಿವರ್ತಿಗಳು ವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಯಾದಗಿರಿ

ಜಿಲ್ಲೆಯ ಶೇಕಡಾ 5.6% ಪ್ರತಿವರ್ತಿಗಳು ಅವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಯಾದಗಿರಿ ಜಿಲ್ಲೆಯ ಶೇಕಡಾ 94.4% ಪ್ರತಿವರ್ತಿಗಳು ವಿಭಕ್ತ ಕುಟುಂಬವನ್ನು ಹೊಂದಿರುತ್ತಾರೆ. ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಶೇಕಡಾ 94.4% ಪ್ರತಿವರ್ತಿಗಳು ವಿಭಕ್ತ ಕುಟುಂಬವನ್ನು ಹೊಂದಿದ್ದಾರೆ. ಈ ಸಮುದಾಯದ ಎರಡೂ ಜಿಲ್ಲೆಗಳ ಕುಟುಂಬದ ಸ್ವರೂಪ ಬದಲಾಗಿರುವುದನ್ನು ಇಲ್ಲಿ ಗಮನಿಸಬಹುದು. ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸನ್ನಿವೇಶ ಕುಟುಂಬದ ಸ್ವರೂಪವನ್ನು ಬದಲಾಯಿಸಿದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಎರಡೂ ಜಿಲ್ಲೆಯ ಪ್ರತಿವರ್ತಿಗಳು ಅಭಿಪ್ರಾಯಪಟ್ಟಿದ್ದಾರೆ. ಆರ್ಥಿಕ ಸದೃಢತೆಯಿಲ್ಲದಿರುವುದು ಮತ್ತು ಸೂಕ್ತ ಅವಕಾಶಗಳ ಕೊರತೆ ಕುಟುಂಬ ಸ್ವರೂಪದ ಮೇಲೆ ಗಂಭೀರ ಪರಿಣಾಮವನ್ನು ಬೀರಿದೆ ಎಂದು ಹೇಳಬಹುದು.

**ಕೋಷ್ಟಕ 2: ನಿಮ್ಮ ಕುಟುಂಬದ ಜವಾಬ್ದಾರಿಯನ್ನು ಯಾರು ವಹಿಸುತ್ತಾರೆ?**

| ಪ್ರತಿಕ್ರಿಯೆ | ಗುಲಬರ್ಗಾ | | ಯಾದಗಿರಿ | | ಒಟ್ಟು | |
|---|---|---|---|---|---|---|
| | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ |
| ಸ್ತ್ರೀ | 10 | 6.7% | 54 | 21.6% | 64 | 16% |
| ಪುರುಷ | 140 | 93.3% | 196 | 78.4% | 336 | 84% |
| **ಒಟ್ಟು** | **150** | **100** | **250** | **100** | **400** | **100** |

**ಮೂಲ:** ಕ್ಷೇತ್ರಕಾರ್ಯ

ಕೋಷ್ಟಕ 2: ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳ ಕುಟುಂಬದ ಜವಾಬ್ದಾರಿಯನ್ನು ತಿಳಿಸುತ್ತದೆ. ಗುಲಬರ್ಗಾ ಜಿಲ್ಲೆಯ ಶೇಕಡಾ 93.3% ಪ್ರತಿವರ್ತಿಗಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಪುರುಷರೇ ನಿಭಾಯಿಸುತ್ತಾರೆ ಎಂದು ತಿಳಿಸುತ್ತಾರೆ. ಶೇಕಡಾ 6.7% ಪ್ರತಿವರ್ತಿಗಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಮಹಿಳೆಯರು ನಿಭಾಯಿಸುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ. ಯಾದಗಿರಿ ಜಿಲ್ಲೆಯ ಶೇಕಡಾ 78.4% ಪ್ರತಿವರ್ತಿಗಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಪುರುಷರು ನಿಭಾಯಿಸುತ್ತಾರೆ ಎಂದು ತಿಳಿಸಿದರೆ ಶೇಕಡಾ 21.6% ಪ್ರತಿವರ್ತಿಗಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಮಹಿಳೆಯರು ನಿಭಾಯಿಸುತ್ತಾರೆ ಎಂದು ಅಭಿಪ್ರಾಯಪಡುತ್ತಾರೆ. ಎರಡೂ ಜಿಲ್ಲೆಗಳ ಶೇಕಡಾ 84% ಪ್ರತಿವರ್ತಿಗಳು ತಮ್ಮ ಕುಟುಂಬದ ಜವಾಬ್ದಾರಿಯನ್ನು ಪುರುಷರು ನಿಭಾಯಿಸುತ್ತಾರೆ.

ಈ ಸಮುದಾಯದ ಎರಡೂ ಜಿಲ್ಲೆಗಳಲ್ಲಿ ಪುರುಷರು ಕುಟುಂಬದ ಯಜಮಾನನಾಗಿ ಎಲ್ಲಾ ಜವಾಬ್ದಾರಿಗಳನ್ನು ವಹಿಸುತ್ತಾರೆ. ಕೆಲವೊಂದು ಕುಟುಂಬಗಳಲ್ಲಿ ಮಹಿಳೆಯರೇ ಎಲ್ಲಾ ಜವಾಬ್ದಾರಿಗಳನ್ನೂ ವಹಿಸುತ್ತಾರೆ. ಆದರೆ ಸಮಾಜದಲ್ಲಿ ಸಾಮಾಜಿಕ ಮನ್ನಣೆಯನ್ನು ಪುರುಷರೇ ಪಡೆಯುತ್ತಾರೆ ಎನ್ನುವ ಅಭಿಪ್ರಾಯವನ್ನು ಪ್ರತಿವರ್ತಿಗಳು ಸಂಶೋಧನಾ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನೀಡುತ್ತಾರೆ. ಎಲ್ಲ

ಸಮುದಾಯ ಮತ್ತು ಸಮಾಜಗಳಂತೆ ಈ ಸಮುದಾಯವು ಕೂಡ ಪುರುಷ ಪ್ರಧಾನತೆಯನ್ನು ಒಪ್ಪಿಕೊಳ್ಳುತ್ತದೆ ಮತ್ತು ಅನುಸರಿಸುತ್ತದೆ.

**ಕೋಷ್ಟಕ 3: ಶೈಕ್ಷಣಿಕ ವಿವರ**

| ಪ್ರತಿಕ್ರಿಯೆ | ಗುಲಬರ್ಗಾ | | ಯಾದಗಿರಿ | | ಒಟ್ಟು | |
|---|---|---|---|---|---|---|
| | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ |
| ಅನಕ್ಷರಸ್ಥರು | 95 | 63.3% | 169 | 67.6% | 264 | 66% |
| ಪ್ರಾಥಮಿಕ | 10 | 6.7% | 19 | 7.6% | 29 | 7.2% |
| ಮಾಧ್ಯಮಿಕ | 20 | 13.3% | 25 | 10% | 45 | 11.3% |
| ಪಿಯುಸಿ | 18 | 12.3% | 17 | 6.8% | 35 | 8.7% |
| ಪದವಿ | 05 | 3.6 | 18 | 7.2% | 23 | 6% |
| ಸ್ನಾತಕೋತ್ತರ | 01 | 0.4 | 01 | 0.4% | 2 | 0.4% |
| ವೃತ್ತಿಪರ ಕೋರ್ಸ್ | 01 | 0.4 | 01 | 0.4% | 2 | 0.4% |
| **ಒಟ್ಟು** | **150** | **100** | **250** | **100** | **400** | **100** |

**ಮೂಲ:** ಕ್ಷೇತ್ರಕಾರ್ಯ

ಕೋಷ್ಟಕ 3: ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳ ಶೈಕ್ಷಣಿಕ ಸ್ಥಿತಿಯನ್ನು ತಿಳಿಸುತ್ತದೆ. ಗುಲಬರ್ಗಾ ಜಿಲ್ಲೆಯ ಶೇಕಡಾ 63.3% ಪ್ರತಿವರ್ತಿಗಳು ಅನಕ್ಷರಸ್ಥರಾಗಿರುತ್ತಾರೆ. ಶೇಕಡಾ 6.7% ಪ್ರತಿವರ್ತಿಗಳು ಪ್ರಾಥಮಿಕ ಶಿಕ್ಷಣವನ್ನು ಮತ್ತು ಶೇಕಡಾ 13.3% ಪ್ರತಿವರ್ತಿಗಳು ಮಾಧ್ಯಮಿಕ ಶಿಕ್ಷಣವನ್ನು ಪಡೆದಿರುತ್ತಾರೆ. ಶೇಕಡಾ 12.3% ಪ್ರತಿವರ್ತಿಗಳು ಪಿಯುಸಿ ಮತ್ತು ಶೇಕಡಾ 0.4% ಪ್ರತಿವರ್ತಿಗಳು ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಶೇಕಡಾ 0.4% ಪ್ರತಿವರ್ತಿಗಳು ವೃತ್ತಿಪರ ಕೋರ್ಸನ್ನು ಮಾಡಿರುತ್ತಾರೆ. ಯಾದಗಿರಿ ಜಿಲ್ಲೆಯ ಶೇಕಡಾ 67.6% ಪ್ರತಿವರ್ತಿಗಳು ಅನಕ್ಷರಸ್ಥರಾಗಿರುತ್ತಾರೆ. ಶೇಕಡಾ 7.6% ಪ್ರತಿವರ್ತಿಗಳು ಪ್ರಾಥಮಿಕ ಶಿಕ್ಷಣವನ್ನು ಮತ್ತು ಶೇಕಡಾ 10% ಪ್ರತಿವರ್ತಿಗಳು ಮಾಧ್ಯಮಿಕ ಶಿಕ್ಷಣವನ್ನು ಪಡೆದಿರುತ್ತಾರೆ. ಶೇಕಡಾ 6.8% ಪ್ರತಿವರ್ತಿಗಳು ಪಿಯುಸಿ ಮತ್ತು ಶೇಕಡಾ 7.2% ಪ್ರತಿವರ್ತಿಗಳು ಪದವಿ ಶಿಕ್ಷಣವನ್ನು ಮುಗಿಸಿರುತ್ತಾರೆ. 0.4% ಪ್ರತಿವರ್ತಿಗಳು ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. 0.4% ಪ್ರತಿವರ್ತಿಗಳು ವೃತ್ತಿಪರ ಕೋರ್ಸನ್ನು ಮಾಡಿರುತ್ತಾರೆ. ಈ ಎರಡೂ ಜಿಲ್ಲೆಗಳಲ್ಲಿ ಶೇಕಡಾ 66% ರಷ್ಟು ಪ್ರತಿವರ್ತಿಗಳು ಅನಕ್ಷರಸ್ಥರಾಗಿರುತ್ತಾರೆ. ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಬಹುತೇಕರು ಅನಕ್ಷರಸ್ಥರಾಗಿದ್ದಾರೆ. ಆರ್ಥಿಕವಾಗಿ ಸದೃಢವಾದ ಬದುಕನ್ನು ಕಾಣದ ಬಹುತೇಕ ಕುಟುಂಬಗಳು ಅಕ್ಷರ ಜ್ಞಾನವಿಲ್ಲದೆ ಒಳ್ಳೆಯ ಉದ್ಯೋಗವನ್ನು ಪಡೆಯಲಾಗದೆ ಶೈಕ್ಷಣಿಕವಾಗಿ ಹಿಂದುಳಿವೆ. ಕರ್ನಾಟಕ ಸರಕಾರ ಉಚಿತ ಶಿಕ್ಷಣದ ಯೋಜನೆಯನ್ನು ಜಾರಿಗೆ ತಂದರೂ ಬಡತನದ ಸಮಸ್ಯೆ ಬೆಳೆಯುವ ಮಕ್ಕಳನ್ನು ದುಡಿಮೆಗೆ ಹೋಗುವಂತೆ

ಮಾಡಿದೆ. ಹಾಗಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ಅನಕ್ಷರಸ್ಥರಾಗಿದ್ದಾರೆ. ಇತ್ತೀಚಿನ ವರುಷಗಳಲ್ಲಿ ಸ್ನಾತಕೋತ್ತರ ಪದವಿಗಳಿಗೆ ವಾಲ್ಮೀಕಿ ಸಮುದಾಯ ತೆರೆದುಕೊಂಡಿರುವುದರಿಂದ ಮುಂದಿನ ದಿನಗಳಲ್ಲಿ ವಾಲ್ಮೀಕಿ ಸಮುದಾಯದ ಶಿಕ್ಷಣದ ಮಟ್ಟ ಏರಿಕೆಯನ್ನು ಕಾಣಬಹುದು ಎನ್ನುವ ಅಭಿಪ್ರಾಯ ಪ್ರತಿವರ್ತಿಗಳದ್ದಾಗಿದೆ.

**ಕೋಷ್ಟಕ 4: ಮಾಹಿತಿದಾರರ ಉದ್ಯೋಗ ವಿವರ**

| ಪ್ರತಿಕ್ರಿಯೆ | ಗುಲಬರ್ಗಾ | | ಯಾದಗಿರಿ | | ಒಟ್ಟು | |
|---|---|---|---|---|---|---|
| | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ |
| ಕೃಷಿ | 50 | 33.3% | 63 | 25.2% | 113 | 28.2% |
| ಕೂಲಿ | 56 | 37.3% | 123 | 49.2% | 179 | 44.8% |
| ವ್ಯಾಪಾರ | 11 | 7.3% | 15 | 6% | 26 | 6.5% |
| ಸ್ವಯಂ ಉದ್ಯೋಗ | 03 | 2% | 05 | 2% | 8 | 2% |
| ಖಾಸಗಿ | 14 | 9.3% | 19 | 7.6% | 33 | 8.3% |
| ಇತರೆ | 16 | 10.7% | 25 | 10% | 41 | 10.3% |
| **ಒಟ್ಟು** | **150** | **100** | **250** | **100** | **400** | **100** |

ಮೂಲ: ಕ್ಷೇತ್ರಕಾರ್ಯ

ಕೋಷ್ಟಕ 4ರಲ್ಲಿ ತಿಳಿಸಿದಂತೆ ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳಲ್ಲಿ ಗುಲಬರ್ಗಾದ 33.3% ಪ್ರತಿವರ್ತಿಗಳು ಕೃಷಿಯನ್ನು ತಮ್ಮ ಜೀವನದ ಮೂಲವನ್ನಾಗಿಸಿದ್ದಾರೆ. 37.3% ಪ್ರತಿವರ್ತಿಗಳು ದಿನಗೂಲಿಯನ್ನು ಮಾಡುತ್ತಿದ್ದಾರೆ. 7.3% ಪ್ರತಿವರ್ತಿಗಳು ವ್ಯಾಪಾರದಲ್ಲಿ ತೊಡಗಿಸಿಕೊಂಡರೆ 2% ಪ್ರತಿವರ್ತಿಗಳು ಸ್ವಯಂ ಉದ್ಯೋಗವನ್ನು ನಡೆಸುತ್ತಿದ್ದಾರೆ. ಗುಲಬರ್ಗಾದ 9.3% ಪ್ರತಿವರ್ತಿಗಳು ಖಾಸಗಿ ಸಂಸ್ಥೆಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. 10.7% ಪ್ರತಿವರ್ತಿಗಳು ನಿರ್ದಿಷ್ಟ ಕೆಲಸದಲ್ಲಿ ತೊಡಗಿಸಿಕೊಳ್ಳಲಾಗದೆ ಇತರ ಸಣ್ಣಪುಟ್ಟ ಉದ್ಯೋಗ ಮೂಲವನ್ನು ನಂಬಿಕೊಂಡು ಬದುಕುತ್ತಿದ್ದಾರೆ. ಯಾದಗಿರಿ ಜಿಲ್ಲೆಯ ಶೇಕಡಾ 25.2% ಪ್ರತಿವರ್ತಿಗಳು ಕೃಷಿಯಲ್ಲಿ ತೊಡಗಿಸಿಕೊಂಡರೆ 49.2% ಪ್ರತಿವರ್ತಿಗಳು ಕೂಲಿಯನ್ನು ತಮ್ಮ ವೃತ್ತಿಯನ್ನಾಗಿಸಿದ್ದಾರೆ. ಶೇಕಡಾ 6% ಪ್ರತಿವರ್ತಿಗಳು ವ್ಯಾಪಾರದಲ್ಲಿ ತೊಡಗಿಸಿಕೊಂಡರೆ 2% ಪ್ರತಿವರ್ತಿಗಳು ಸ್ವಯಂ ಉದ್ಯೋಗದಲ್ಲಿದ್ದಾರೆ. ಶೇಕಡಾ 7.6% ಪ್ರತಿವರ್ತಿಗಳು ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ. ಶೇಕಡಾ 10% ಪ್ರತಿವರ್ತಿಗಳು ಇತರ ಉದ್ಯೋಗದಲ್ಲಿದ್ದಾರೆ.

ವಾಲ್ಮೀಕಿ ಸಮುದಾಯದ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಪ್ರತಿವರ್ತಿಗಳು ಕೃಷಿಯನ್ನು ತಮ್ಮ ಬದುಕಿನ ಆಧಾರವಾಗಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬದುಕುವ ಈ ಸಮುದಾಯದ ಜನರು ಕೈ ಕಸುಬುಗಳನ್ನು ಮಾಡುತ್ತಾ ಜಮೀನುದಾರರ, ಸಿರಿವಂತರ ಮನೆಗಳಲ್ಲಿ ದಿನಗೂಲಿಯ ಕೆಲಸಗಳನ್ನು

ಮಾಡುತ್ತಾರೆ. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದರಿಂದಾಗಿ ಸರಕಾರಿ ಮತ್ತು ಖಾಸಗಿ ಉದ್ಯೋಗಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ ಎನ್ನುವುದು ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದುಬಂದಿದೆ. ಪ್ರತಿವರ್ತಿಗಳ ಜೊತೆಗಿನ ಮಾತುಕತೆಯಲ್ಲಿ ಅನಕ್ಷರತೆಯಿಂದಾಗಿ ಉತ್ತಮ ಉದ್ಯೋಗವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಪ್ರತಿವರ್ತಿಗಳು ಅಭಿಪ್ರಾಯಪಡುತ್ತಾರೆ.

**ಕೋಷ್ಟಕ 5: ಕುಟುಂಬದ ವಾರ್ಷಿಕ ಆದಾಯದ ವಿವರ**

| ಪ್ರತಿಕ್ರಿಯೆ | ಗುಲಬರ್ಗಾ | | ಯಾದಗಿರಿ | | ಒಟ್ಟು | |
|---|---|---|---|---|---|---|
| | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ | ಪ್ರತಿವರ್ತಿಗಳು | ಶೇಕಡಾ |
| 5000–10000 | 50 | 33.3% | 94 | 37.6% | 144 | 36% |
| 11000–20000 | 69 | 46% | 118 | 47.2% | 187 | 46.8% |
| 21000–30000 | 17 | 11.3% | 26 | 10.4% | 43 | 10.8% |
| 31000ಕ್ಕಿಂತ ಹೆಚ್ಚು | 14 | 9.3% | 12 | 4.8% | 26 | 6.5% |
| **ಒಟ್ಟು** | **150** | **100** | **250** | **100** | **400** | **100** |

**ಮೂಲ:** ಕ್ಷೇತ್ರಕಾರ್ಯ

ಕೋಷ್ಟಕ 5ರಲ್ಲಿ ತಿಳಿಸಿದಂತೆ ಗುಲಬರ್ಗಾ ಜಿಲ್ಲೆಯ ಶೇಕಡಾ 33.3% ಪ್ರತಿವರ್ತಿಗಳು ಐದು ಸಾವಿರ ರೂಪಾಯಿಯಿಂದ ಹತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಶೇಕಡಾ 46% ಪ್ರತಿವರ್ತಿಗಳು ಹನ್ನೊಂದು ಸಾವಿರದಿಂದ ಇಪ್ಪತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಶೇಕಡಾ 11.3% ಪ್ರತಿವರ್ತಿಗಳು ಇಪ್ಪತ್ತೊಂದು ಸಾವಿರದಿಂದ ಮೂವತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಶೇಕಡಾ 9.3% ಪ್ರತಿವರ್ತಿಗಳು ಮೂವತ್ತೊಂದು ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಯಾದಗಿರಿ ಜಿಲ್ಲೆಯ ಶೇಕಡಾ 37.6% ಪ್ರತಿವರ್ತಿಗಳು ಐದು ಸಾವಿರ ರೂಪಾಯಿಯಿಂದ ಹತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಶೇಕಡಾ 47.2% ಪ್ರತಿವರ್ತಿಗಳು ಹನ್ನೊಂದು ಸಾವಿರದಿಂದ ಇಪ್ಪತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಶೇಕಡಾ 10.4% ಪ್ರತಿವರ್ತಿಗಳು ಇಪ್ಪತ್ತೊಂದು ಸಾವಿರದಿಂದ ಮೂವತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಮತ್ತು ಶೇಕಡಾ 4.3% ಪ್ರತಿವರ್ತಿಗಳು ಮೂವತ್ತೊಂದು ಸಾವಿರಕ್ಕಿಂತ ಹೆಚ್ಚು ವಾರ್ಷಿಕ ಆದಾಯವನ್ನು ಪಡೆಯುತ್ತಾರೆ. ಎರಡೂ ಜಿಲ್ಲೆಗಳಲ್ಲಿ 46.8% ಪ್ರತಿವರ್ತಿಗಳು ಹನ್ನೊಂದು ಸಾವಿರದಿಂದ ಇಪ್ಪತ್ತು ಸಾವಿರದ ತನಕ ವಾರ್ಷಿಕ ಆದಾಯವನ್ನು ಪಡೆಯುತ್ತಾರೆ.

ಯಾವುದೇ ಸಮುದಾಯದ ಜನರು ಆರ್ಥಿಕವಾಗಿ ಸ್ಥಿರತೆಯನ್ನು ಹೊಂದಿದ್ದಾಗ ಅವರ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಾಗಿರುತ್ತದೆ. ವಾಲ್ಮೀಕಿ ಸಮುದಾಯದ ಪ್ರತಿವರ್ತಿಗಳು ಬಡತನದಿಂದಾಗಿ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಆರ್ಥಿಕ ಸಂಕಷ್ಟವನ್ನು ಎದುರಿಸುವ ಪ್ರತಿವರ್ತಿಗಳಿಗೆ ರಾಜಕೀಯ ಭಾಗವಹಿಸುವಿಕೆ ಮೊದಲ ಆದ್ಯತೆಯಾಗಿ ಕಂಡುಬರುವುದಿಲ್ಲ. ದಿನನಿತ್ಯದ

ಅಗತ್ಯತೆಗಳಿಗೆ ಒದ್ದಾಡುವ ಪ್ರತಿವರ್ತಿಗಳು ರಾಜಕೀಯ ಭಾಗವಹಿಸುವಿಕೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅಭಿಪ್ರಾಯಪಡುತ್ತಾರೆ.

**ಉಪಸಂಹಾರ:**

ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ವಾಲ್ಮೀಕಿ ಸಮುದಾಯದ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಿಂದುಳಿದಿರುವುದನ್ನು ಕಾಣಬಹುದಾಗಿದೆ. ಇವರು ಇಂದಿಗೂ ಕೂಡ ಬಡತನ, ಅನಕ್ಷರತೆ, ನಿರುದ್ಯೋಗ, ವಲಸೆ, ಶೋಷಣೆ ಮುಂತಾದ ಸಮಸ್ಯೆಗಳ ಜೊತೆಗೆ ಅನಾರೋಗ್ಯದ ಸಮಸ್ಯೆಗಳಿಂದಲೂ ಬಳಲುತ್ತಿದ್ದಾರೆ. ಹಾಗಾಗಿ ಸರ್ಕಾರವು ಇವರ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗಾಗಿ ಹೊಸ ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಈಗಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿರುವುದು ಅನಿವಾರ್ಯವಾಗಿದೆ. ಪ್ರಸ್ತುತ ಬಡತನ ಅಂಥಹ ಸಮಸ್ಯೆಯಿಂದಾಗಿ ಮಕ್ಕಳ ವಿದ್ಯಾಭ್ಯಾಸ ಮೊಟಕುಗೊಂಡು ಮಧ್ಯಂತರದಲ್ಲಿ ಶಾಲೆ ತೊರೆಯುವವರ ಪ್ರಮಾಣ ಹೆಚ್ಚಿದೆ ಹಾಗೂ ಕಲಿಕಾ ಸಮಸ್ಯೆಗಳಿಂದಾಗಿ ಮುಂದಿನ ತರಗತಿಗಳಿಗೆ ಹಾಜರಾಗದೇ ಗೈರು ಹಾಜರಾಗುತ್ತಿರುವುದನ್ನು ಕೂಡ ಕಾಣಬಹುದಾಗಿದೆ. ಈ ಸಮಸ್ಯೆಗಳ ನಿವಾರಣೆಗೆ ವಿಶೇಷ ಯೋಜನೆಗಳನ್ನು ರೂಪಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಕ್ರಮಗಳನ್ನು ರೂಪಿಸುವ ತುರ್ತು ಇದೆ.

**ಪರಾಮರ್ಶನ ಗ್ರಂಥಗಳು**


- ಬೇವಿನ ಕಟ್ಟೆ ಮಂಜುನಾಥ. (ಸಂ.) *ವ್ಯಾಧ ಚರಿತೆ ಬೇಡ ಕುಲ ಮೂಲದ ಕಥನಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪೂಜಾರಹಳ್ಳಿ ವಿರೂಪಾಕ್ಷಿ. (2007). *ಬೇಟೆ ಮತ್ತು ಬೇಡರು. ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಚಾರಿತ್ರಿಕ ಅಧ್ಯಯನ.* ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ,
- ಪೂಜಾರಹಳ್ಳಿ ವಿರೂಪಾಕ್ಷಿ. (2006). ಕರ್ನಾಟಕದಲ್ಲಿ ತಳವಾರಿಕೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸಿಂಗ್, ಬಿ.ಪಿ. (1987). ಎ ಡಿಕ್ಷನರಿ ಆಫ್ ಮಾಡ್ರನ್ ಪಾಲಿಟಿಕ್ಸ್ ಆಂಡ್ ಪೊಲಿಟಿಕಲ್ ಸೋಷಿಯಾಲಜಿ. ಮಿತ್ತಲ್ ಪಬ್ಲಿಕೇಷನ್ಸ್.
- *District wise Schedule Tribes Sub caste wise Population as per 2011 Population Census.* Karnataka Maharshi Valmiki Schedule Tribes Development Corporation Limited
- Padhi and Tripathy. (1994). Voting behaviour of tribals in India', Discovery Publishing house.